

# ಜನಮುಖಿ ಪಥದಲ್ಲಿ ಪ್ರಯೋಗಪ್ರಿಯೆ ಚಂಪಾ

■ ಸುಮಲತಾ ಎನ್.

ಹಲವು ಸಿನಿಮೋತ್ಸವಗಳಲ್ಲಿ ಮನ್ನಣೆ ಗಳಿಸಿದ, ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತು ಪಡೆದುಕೊಂಡ ಕನ್ನಡದ 'ಕೋಳಿ ಎಸ್ರು' ಸಿನಿಮಾ ಇದೀಗ ಥಿಯೇಟರುಗಳಲ್ಲಿ ಬಿಡುಗಡೆಗೊಳ್ಳಲು ಸಜ್ಜಾಗುತ್ತಿದೆ. ಕಲಾತ್ಮಕ ಅಥವಾ ಪ್ಯಾರಲಲ್ ಸಿನಿಮಾಗಳನ್ನು ದೊಡ್ಡ ಮಟ್ಟದಲ್ಲಿ ಜನರ ಬಳಿ ಕೊಂಡೊಯ್ಯುವ ಪ್ರಯತ್ನವಾಗಿ ಇಟ್ಟಿರುವ ತಮ್ಮ ಹೊಸ ಹೆಜ್ಜೆಯ ಕುರಿತು ನಿರ್ದೇಶಕಿ ಚಂಪಾ ಪಿ. ಶೆಟ್ಟಿ, 'ಸುಧಾ'ದೊಂದಿಗೆ ಮಾತನಾಡಿದ್ದಾರೆ.

◆ ಕಲಾತ್ಮಕ ಸಿನಿಮಾಗಳೆಂದರೆ ಥಿಯೇಟರ್ ರಿಲೀಸ್‌ಗಲ್ಲ ಎಂಬ ಪೂರ್ವನಿರ್ಧರಿತ ಮನಸ್ಥಿತಿ ನಡುವೆ 'ಕೋಳಿ ಎಸ್ರು' ಸಿನಿಮಾವನ್ನು ಥಿಯೇಟರ್‌ಗಳಲ್ಲಿ ಬಿಡುಗಡೆ ಮಾಡುವ ತಯಾರಿಯಲ್ಲಿದ್ದೀರಿ. ಈ ಆಲೋಚನೆ ಹುಟ್ಟಿದ್ದು ಹೇಗೆ?

ಒಮ್ಮೆ 'ಹದಿನೇಳೆಂಟು' ಸಿನಿಮಾ ನಿರ್ದೇಶಕ ಪೃಥ್ವಿ ಕೊಣನೂರು ಅವರೊಂದಿಗೆ ಕಲಾತ್ಮಕ ಸಿನಿಮಾಗಳ ಕುರಿತ ಮಾತುಕತೆ ನಡೆದಿತ್ತು. ಈ ಸಿನಿಮಾಗಳನ್ನು ಜನರ ಬಳಿಗೆ ಕೊಂಡೊಯ್ಯಬೇಕಾದ ಮಾರ್ಗಗಳ ಕುರಿತು ಮಾತು ಬಂತು. ಆ ಸಂದರ್ಭ, 'ಕೋಳಿ ಎಸ್ರು' ಹಾಗೂ 'ಹದಿನೇಳೆಂಟು' ಎರಡೂ ಸಿನಿಮಾಗಳನ್ನು ಒಟ್ಟಿಗೆ ಬಿಡುಗಡೆ ಮಾಡಿದರೆ ಹೇಗೆಂಬ ಆಲೋಚನೆ ಹುಟ್ಟಿಕೊಂಡಿತು. ಪೃಥ್ವಿ ಅವರು ಮತ್ತೊಂದು ಸಲಹೆ ನೀಡಿದರು. ಬಿಡುಗಡೆಗೆ ಮುಂಚೆಯೇ, ವೆಬ್‌ಸೈಟ್ ರೂಪಿಸಿ, ಆ ಮೂಲಕ ಕಲಾತ್ಮಕ ಸಿನಿಮಾಗಳಿಗೆ ಬೆಂಬಲ ನೀಡಬಯಸುವವರು ಅಥವಾ ಸಿನಿಮಾ ನೋಡಲು ಬಯಸುವವರು ಎರಡು ಸಿನಿಮಾಗಳ ಟಿಕೆಟ್ ಅನ್ನು ಒಟ್ಟಿಗೆ ಖರೀದಿಸಬಹುದು ಎಂಬ ಯೋಚನೆಯದು.

◆ ದೊಡ್ಡ ದೊಡ್ಡ ಕಮರ್ಷಿಯಲ್ ಸಿನಿಮಾಗಳ ನಡುವೆ ಕಲಾತ್ಮಕ ಸಿನಿಮಾಗಳಿಗೆ ಸ್ಥಾನ ಕಂಡುಕೊಳ್ಳಲು ಇರುವ ಸದ್ಯದ ಸವಾಲುಗಳೇನು?

ದೊಡ್ಡ ಬಜೆಟ್‌ನಲ್ಲಿ ರೂಪುಗೊಂಡ, ಕೋಟಿಗಟ್ಟಲೆ ದುಡ್ಡನ್ನು ಸಿನಿಮಾ ರಿಲೀಸ್‌ಗೆಂದೇ ಖರ್ಚು ಮಾಡುವ ಕಮರ್ಷಿಯಲ್ ಸಿನಿಮಾಗಳೇ ಬಿಡುಗಡೆ ವಿಷಯದಲ್ಲಿ ಪೇಚಾಡುತ್ತಿವೆ. ಇಂಥ ಸಂದರ್ಭದಲ್ಲಿ ಪ್ಯಾರಲಲ್ ಸಿನಿಮಾಗಳ ಬಿಡುಗಡೆಗೆ ಕನಿಷ್ಠ 20ರಿಂದ 30 ಲಕ್ಷವಾದರೂ ಬೇಕು. ಹಣ ಒಂದು ವಿಷಯವಾದರೆ, ಪ್ರತಿಸ್ಪರ್ಧೆ ಮತ್ತೊಂದು ಸವಾಲು. ಈಗ ಸಾಕಷ್ಟು ಮನರಂಜನಾ ಚಾನಲ್‌ಗಳಿವೆ, ಒಟಿಟಿ ವೇದಿಕೆಗಳಿವೆ. ಸಿನಿಮಾ ನೋಡಲು ಜನರನ್ನು ಕರೆದುಕೊಂಡು ಬರುವುದೇ ದೊಡ್ಡ ಸಾಹಸ. ನಮ್ಮಂಥವರಿಗೆ ಇದು ದುಪ್ಪಟ್ಟು ಸವಾಲು. ಹೀಗಿದ್ದೂ ಜನರ ಬಳಿಗೆ ಪ್ಯಾರಲಲ್ ಸಿನಿಮಾಗಳನ್ನು ಕೊಂಡೊಯ್ಯಬೇಕು, ಅವರಿಗೂ ಈ ಸಿನಿಮಾಗಳ ಸತ್ವ ತಿಳಿಸಬೇಕೆಂಬ ಪ್ರಯತ್ನ ನಮ್ಮದು. ಈ ಹೊಸ ಪ್ರಯತ್ನ, ಮುಂದೆ ನಮ್ಮ ದಾರಿಯಲ್ಲಿ ಬರುವವರಿಗೂ ಮಾದರಿಯಾಗಬೇಕೆನ್ನುವುದು ಆಶಯ.

◆ ಪ್ಯಾರಲಲ್ ಸಿನಿಮಾಗಳಿಗೆ ಒಟಿಟಿ ಪ್ರತಿಸ್ಪಂದನೆ ಹೇಗಿದೆ?

ಅದಷ್ಟು ಕಡಿಮೆ ಬಜೆಟ್‌ನಲ್ಲಿ ಮಾಡುವಂಥ ಸಿನಿಮಾಗಳು ನಮ್ಮದು. ಒಟಿಟಿಗೆ ಕೊಡೋಣ ಎಂದರೆ, ಮೊದಲು ಥಿಯೇಟರಿನಲ್ಲಿ ಬಿಡುಗಡೆ ಮಾಡಿದ ನಂತರವಷ್ಟೇ ಅಲ್ಲಿ ತೆಗೆದುಕೊಳ್ಳುತ್ತಾರೆ. ಈ ಕ್ರಮ ಕನ್ನಡ ಸಿನಿಮಾಗೆ ಮಾತ್ರ ಅನ್ವಯ. ಮಲೆಯಾಳಂ, ತಮಿಳು ಸಿನಿಮಾಗಳಿಗೆ ರಿಲೀಸ್ ಆಗಿಲ್ಲ ಎಂದರೂ ತೆಗೆದುಕೊಳ್ಳಲಾಗುತ್ತದೆ. ಆದರೆ ಕನ್ನಡ ಸಿನಿಮಾಗಳಿಗೆ ಸ್ಟಾರ್ ನಟರು, ದೊಡ್ಡ ಬಜೆಟ್ ಸಿನಿಮಾ ಬಿಟ್ಟರೆ ನಮ್ಮ ಕಲಾತ್ಮಕ ಸಿನಿಮಾಗಳಿಗೆ ನೇರವಾದ ವೇದಿಕೆ ಅಲ್ಲಿಲ್ಲ.

◆ 'ಪರಸ್ಪರ' ಪ್ರಯತ್ನಕ್ಕೆ ಹೇಗೆ ಸಜ್ಜಾಗಿದ್ದೀರಿ?

'ಪರಸ್ಪರ' ವೆಬ್‌ಸೈಟ್ ಮೂಲಕ ಮುಂಚಿತವಾಗಿಯೇ ಟಿಕೆಟ್ ಮಾರಾಟ ಮಾಡುತ್ತಿರುವುದರಿಂದ, ಟಿಕೆಟ್ ಕೊಂಡ ಪ್ರೇಕ್ಷಕರು ಬಂದೇ ಬರುತ್ತಾರೆನ್ನುವ ವಿಶ್ವಾಸವಿದೆ. ಯಾವ ಸ್ಥಳದಲ್ಲಿ, ಯಾವ ದಿನಕ್ಕೆ ಟಿಕೆಟ್ ಬೇಕು ಎಂದು ಜನರಿಂದ ಮಾಹಿತಿ ತೆಗೆದುಕೊಂಡು ಅವರ ಆದ್ಯತೆಗೆ ತಕ್ಕಂತೆ ಟಿಕೆಟ್ ನೀಡಲಾಗುತ್ತದೆ. ನಾಮಕಾವಾಸ್ತೆಗೆ ಒಟಿಟಿಗೆ ಸಿನಿಮಾ ಕೊಟ್ಟು ಸುಮ್ಮನಿರುವುದಕ್ಕಿಂತ ಹೀಗೆ ಕಷ್ಟಪಟ್ಟು ಜನರ ಬಳಿಗೆ ಕೊಂಡೊಯ್ಯುವುದರಲ್ಲಿ ಖುಷಿ ಎನಿಸುತ್ತಿದೆ.

'ಕಲಾತ್ಮಕ ಸಿನಿಮಾ' ಎನ್ನುತ್ತಿದ್ದಂತೆ ಅದು ಅರ್ಥವಾಗದ್ದು ಎಂಬ ಮನೋಭಾವ ಜನರಲ್ಲಿದೆ. ಆದರೆ ಕಲಾತ್ಮಕ ಸಿನಿಮಾಗಳೆನಿಸಿಕೊಂಡವು ಕೂಡ ಆರಾಮಾಗಿ ನೋಡಿಸಿಕೊಳ್ಳುವಂಥವೇ. 'ಕೋಳಿ ಎಸ್ರು', 'ಹದಿನೇಳೆಂಟು' ಆ ಸಾಲಿಗೆ ಸೇರಿವೆ.

◆ ಸಿನಿಮೋತ್ಸವಗಳಲ್ಲಿ 'ಕೋಳಿ ಎಸ್ರು' ಕೊಟ್ಟ ಅನುಭವ ಹೇಗಿತ್ತು?

ಸಿನಿಮೋತ್ಸವಕ್ಕೆಂದೇ ಈ ಸಿನಿಮಾ ಮಾಡಿದ್ದು. ವಸ್ತುವಿಷಯ ಸಿನಿಮಾಗೆ ಒಪ್ಪುತ್ತದೆ ಎಂದು ಯೋಚಿಸಿ ರೂಪಿಸಿದ್ದು. ನ್ಯೂಯಾರ್ಕ್–ಇಂಡಿಯನ್ ಸಿನಿಮೋತ್ಸವ, ಔರಂಗಾಬಾದ್ ಸಿನಿಮೋತ್ಸವದಲ್ಲಿ ಮೊದಲು ಪಾಲ್ಗೊಂಡೆವು. ಅಲ್ಲಿ ನಮಗೆ ಅತ್ಯುತ್ತಮ ಸ್ಪಂದನೆ ಸಿಕ್ಕಿತು. ಸಿನಿಮಾರಂಗಕ್ಕೆ ಸಂಬಂಧಿಸಿದ ಸಾಕಷ್ಟು ಪರಿಣತರು ಬಂದಿದ್ದರು. ಅವರು ನಮ್ಮ ಸಿನಿಮಾವನ್ನು ಇಷ್ಟಪಟ್ಟು ಬೇರೆ ಬೇರೆ ಸಿನಿಮೋತ್ಸವಗಳಿಗೆ ಶಿಫಾರಸ್ಸು ಮಾಡಿದರು. ಇದುವರೆಗೂ 15–16 ಸಿನಿಮೋತ್ಸವಗಳಿಗೆ ನಮ್ಮ ಸಿನಿಮಾ ಹೋಗಿದೆ. ಒಟ್ಟಾವ, ಜರ್ಮನ್, ಪ್ಯಾರಿಸ್, ಮೆಲ್ಬರ್ನ್ ಎಲ್ಲ ಕಡೆ ಸ್ಕ್ರೀನಿಂಗ್ ಆಗಿದೆ. ಎರಡರಲ್ಲಿ ಪ್ರಶಸ್ತಿ ಬಂತು. ಕೆನಡಾದ ಒಟ್ಟಾವದಲ್ಲಿ 'ಉತ್ತಮ ನಿರ್ದೇಶಕಿ', 'ಉತ್ತಮ ನಟಿ' ಪ್ರಶಸ್ತಿ ಲಭಿಸಿದೆ. ಔರಂಗಾಬಾದ್‌ನಲ್ಲಿ 'ಉತ್ತಮ ನಟಿ'